O.S.5/2020 Cross of PW1

ದಿನಾಂಕ 06-02-2025 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲು :** 4 ನೇ ಪ್ರತಿವಾದಿಯ ಪರ ಶ್ರೀ ಎಸ್ ಆರ್ ಎಚ್ ವಕೀಲರಿಂದ .

ಈ ದಾವೆ ಸಲ್ಲಿಸುವ ಸಮಯದಲ್ಲಿ ಈ ಹಿಂದೆ 4 ನೇ ಪ್ರತಿವಾದಿಯು ಹೂಡಿದ ಅಸಲು ದಾವಾ ಸಂಖ್ಯೆ 172/2018 ರ ಬಗ್ಗೆ ಮಾಹಿತಿ ಇತ್ತು. ನನಗಿಂತ ಮೊದಲೇ ಅಂದರೆ 2006 ರಲ್ಲಿ 4 ನೇ ಪ್ರತಿವಾದಿಯು 5 ಗುಂಟೆ 8 ಆಣೆ ಜಮೀನನ್ನು ಖರೀದಿ ಮಾಡಿದ್ದನು ಎಂದರೆ ಸರಿ. ನಾನು 2013 ರಲ್ಲಿ ದಾವಾ ಆಸ್ತಿಯನ್ನು ಖರೀದಿ ಮಾಡಿದ್ದೇನೆ ಎಂದರೆ ಸರಿ. ನೀವು ದಾವಾ ಆಸ್ತಿಯನ್ನು ಖರೀದಿಸುವಾಗ 1 ರಿಂದ 3 ನೇ ಪ್ರತಿವಾದಿಗಳ ನಡುವೆ ವಾಟಣಿ ದಾವೆ ಇತ್ತು ಎಂದರೆ ಸಾಕ್ಷಿಯು ಆ ರೀತಿ ಇದ್ದ ಬಗ್ಗೆ ತನಗೆ 2018 ರಲ್ಲಿ ಗೊತ್ತಾಯಿತು ಎನ್ನುತ್ತಾರೆ. 4 ನೇ ಪ್ರತಿವಾದಿಯು ಖರೀದಿ ಮಾಡಿದ ಜಮೀನಿನ ಕುರಿತು ನನ್ನ ತಕರಾರು ಇರುವುದಿಲ್ಲ. ದಾವಾ ಆಸ್ತಿಯು ಹಳಿಯಾಳ-ಧಾರವಾಡ ರಸ್ತೆಗೆ ತಾಗಿ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಯು ವಾಣಿಜ್ಯ ಬಳಕೆಯ ಆಸ್ತಿ ಎಂದರೆ ಸರಿ. ದಾವಾ ಆಸ್ತಿಯ ಪ್ರತಿ ಗುಂಟೆ ಮೌಲ್ಯ 15 ಲಕ್ಷ ಆಗಬಹುದು ಎಂದರೆ ಸಾಕ್ಷಿಯು 6-7 ಲಕ್ಷ ಆಗಬಹುದು ಎನ್ನುತ್ತಾರೆ. ದಾವಾ ಆಸ್ತಿಯನ್ನು ನಾನು ನೋಡಿರುತ್ತೇನೆ. ಹಳಿಯಾಳ-ಧಾರವಾಡ ರಸ್ತೆಯಿಂದ 4 ನೇ ಪ್ರತಿವಾದಿಯ ಜಮೀನಿಗೆ ಹೋಗಲು ದಾವಾ ಆಸ್ತಿಯಲ್ಲಿ ಒಂದು ಕಾಲುದಾರಿ ಇದೆ ಎಂದರೆ ಸಾಕ್ಷಿಯು 4 ನೇ ಪ್ರತಿವಾದಿಯ ಜಮೀನು ಎಲ್ಲಿ ಇರುತ್ತದೆ ಎನ್ನುವುದು ಗೊತ್ತಿಲ್ಲ ಹಾಗೂ ದಾವಾ ಆಸ್ತಿಯಲ್ಲಿ ಆ ರೀತಿಯ ಕಾಲುದಾರಿ ಇಲ್ಲ ಎನ್ನುತ್ತಾರೆ. ದಾವಾ ಆಸ್ತಿಯಲ್ಲಿರುವ ಮನೆಯ ಹಿಂದಿನ ಆಸ್ತಿಗಳಿಗೆ ಜನರು ಹೇಗೆ ಹೋಗಿ ಬಂದು ಮಾಡುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ.

ಈ ದಾವೆಯನ್ನು ಹೊರತುಪಡಿಸಿ ನಾನು ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯ ಹಳಿಯಾಳದಲ್ಲಿ ಎರಡು ದಾವೆಗಳನ್ನು ಸಲ್ಲಿಸಿದ್ದೇನೆ. ಅವುಗಳ ಸಂಖ್ಯೆ ಯಾವವು ಎಂದರೆ ಎಮ್ ಎ ನಂಬರ 3/2021 ಮತ್ತು ಓ ಎಸ್ ನಂಬರ 13/2021 ಆಗಿರುತ್ತದೆ. ಅಸಲು ದಾವಾ ಸಂಖ್ಯೆ 13/2021 ರ ಕುರಿತು ಈ ದಾವೆಯಲ್ಲಿ ಹೇಳಿಲ್ಲ ಎಂದರೆ ಸಾಕ್ಷಿಯು ಸದರಿ ದಾವೆಯನ್ನು ಈ ದಾವೆ ಸಲ್ಲಿಸಿದ ನಂತರ ಸಲ್ಲಿಸಿದ್ದೇನೆ ಎನ್ನುತ್ತಾರೆ. ಸದರಿ ದಾವೆಯನ್ನು ಯಾವ ಪರಿಹಾರ ಕೋರಿ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿಯು ತಾನು ಖರೀದಿ ಮಾಡಿದ 13 ಗುಂಟೆ

ಜಮೀನನ್ನು ಮಾರಾಟ ಮಾಡಿದ ವ್ಯಕ್ತಿಗೆ ಆ ರೀತಿ ಮಾರಾಟ ಮಾಡಲು ಹಕ್ಕು ಇರುತ್ತದೆ ಎಂಬ ಕುರಿತು ಅಸಲು ದಾವಾ ಸಂಖ್ಯೆ 13/2021 ಅನ್ನು ಸಲ್ಲಿಸಿದ್ದೇನೆ ಎನ್ನುತ್ತಾರೆ. ನಿಮಗೆ ದಾವಾ ಆಸ್ತಿಯನ್ನು ಯಾರು ಮಾರಾಟ ಮಾಡಿದರೋ ಅವರಿಗೆ ಆ ರೀತಿ ಮಾರಾಟ ಮಾಡುವ ದಿನಾಂಕದಂದು 13 ಗುಂಟೆ ಅಷ್ಟು ಆಸ್ತಿ ಇರಲೇ ಇಲ್ಲ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 13/2021 ರಲ್ಲಿ ನೀವು 13 ಗುಂಟೆ ಜಮೀನಿನ ಸ್ವಾಧೀನ ಕೋರಿ ಪರಿಹಾರ ಕೇಳಿದ್ದೀರಿ ಎಂದರೆ ಸಾಕ್ಷಿಯು ಸದರಿ 13 ಗುಂಟೆ ಜಮೀನು ಪ್ರತ್ಯೇಕ ಜಮೀನು ಎಂದು ಘೋಷಣೆ ಮಾಡಿ ಅದನ್ನು ಸ್ವಾಧೀನ ಕೊಡಿಸಬೇಕು ಎಂದು ಪರಿಹಾರ ಕೇಳಿದ್ದೇನೆ ಎನ್ನುತ್ತಾರೆ. 1 ರಿಂದ 3 ನೇ ಪ್ರತಿವಾದಿಗಳ ನಡುವೆ ಇದ್ದ ವಾಟಣಿ ದಾವೆಯಲ್ಲಿ ಅವರಿಗೆ ಎಷ್ಟು ಹಿಸ್ಸೆ ಹಕ್ಕು ಘೋಷಣೆ ಆಗಿತ್ತೋ ಅದೇ ಪ್ರಕಾರ ಅಮಲು ಬಜಾವಣೆ ಪ್ರಕರಣದಲ್ಲಿ ನ್ಯಾಯಾಲಯದಿಂದ ಅವರಿಗೆ ಕಬ್ಜೆ ಕೊಡಿಸಲಾಗಿದೆ ಎಂದರೆ ಸರಿಯಲ್ಲ.

ಅಸಲು ದಾವಾ ಸಂಖ್ಯೆ 172/2018 ರ ದಾವೆಯಲ್ಲಿ ನಾನು ಹಾಜರಾಗಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಸದರಿ ದಾವೆಯನ್ನು ಈ ದಾವೆಯ 4 ನೇ ಪ್ರತಿವಾದಿಯು ಈ ದಾವೆಯ 1 ರಿಂದ 3 ನೇ ಪ್ರತಿವಾದಿಗಳ ವಿರುದ್ಧ ಯಾವ ಪರಿಹಾರ ಕೋರಿ ಸಲ್ಲಿಸಿದ್ದನು ಎಂಬ ಬಗ್ಗೆ ಮಾಹಿತಿ ಇಲ್ಲ. ನೀವು ಖರೀದಿ ಮಾಡಿದ 13 ಗುಂಟೆ ಅಷ್ಟು ಜಮೀನನ್ನು ಮಾರಾಟ ಮಾಡಲು 1 ರಿಂದ 3 ನೇ ಪ್ರತಿವಾದಿಗಳಿಗೆ ಯಾವುದೇ ಹಕ್ಕು ಇಲ್ಲದಿದ್ದರೂ ಸಹ ನಾನು ಈ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 2006 ರಲ್ಲಿ 4 ನೇ ಪ್ರತಿವಾದಿಯು 5 ಗುಂಟೆ ಜಮೀನನ್ನು ಖರೀದಿ ಮಾಡಿದ ವಿಚಾರ ಗೊತ್ತಿದ್ದರೂ ಸಹ ನೀವು 13 ಗುಂಟೆ ಜಮೀನನ್ನು ಖರೀದಿ ಮಾಡಿದ್ದೀರಿ ಎಂದರೆ ಸಾಕ್ಷಿಯು 4 ನೇ ಪ್ರತಿವಾದಿ ಖರೀದಿ ಮಾಡಿದ ಜಮೀನು ಬೇರೆ ಹಾಗೂ ತಾನು ಖರೀದಿ ಮಾಡಿದ ಜಮೀನು ಬೇರೆ ಎನ್ನುತ್ತಾರೆ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.